ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 7/6/2020

ಸಂ.ಕ 7/6/2020

# ಚುನಾವಣಾಧಿಕಾರಿ ಧರ್ಮಸಂಕಟ

ಬೆಂಗಳೂರು: ಕೊರೊನಾ ನಿಗ್ರಹಕ್ಕೆ ಸಂಬಂಧಿಸಿದಂತೆ ಜಾರಿ ಮಾಡಲಾಗಿರುವ ಮಾರ್ಗಸೂಚಿಗಳು ರಾಜ್ಯಸಭೆ ಚುನಾವಣೆ ಮತದಾನಕ್ಕೆ ಧರ್ಮಸಂಕಟದ ಸ್ಥಿತಿಯನ್ನು ತಂದೊಡ್ಡಿದೆ. ಮಾರ್ಗಸೂಚಿಯ ಪ್ರಕಾರ ವಿಧಾನಸೌಧಕ್ಕೆ 65 ವರ್ಷಕ್ಕಿಂತ ಮೇಲ್ಪಟ್ಟವರು ಪ್ರವೇಶಿಸುವಂತಿಲ್ಲ. ಮತದಾರರಾಗಿರುವ ಶಾಸಕರ ಪೈಕಿ ಸಾಕಷ್ಟು ಮಂದಿ ಇದೇ ವಯೋಮಾನದವರು. ಮುಖ್ಯಮಂತ್ರಿ ಯಡಿಯೂರಪ್ಪ, ಪ್ರತಿಪಕ್ಷದ ನಾಯಕ ಸಿದ್ಧರಾಮಯ್ಯ, ಸೇರಿದಂತೆ ಹಲವರು ಈ ಮಾರ್ಗಸೂಚಿಯ ಪರಿಣಾಮವಾಗಿ ವಿಧಾನಸೌಧದಲ್ಲಿ ಮತಚಲಾಯಿಸುವ ಹಾಗಿಲ್ಲ. ಇಂತಹ ಸ್ಥಿತಿಯಲ್ಲಿ ಏನು ಮಾಡಬೇಕು ಎಂಬುದು ಚುನಾವಣಾಧಿಕಾರಿ ಕೆ.ಎಂ ವಿಶಾಲಾಕ್ಷಿಯವರು ಎದುರಿಸುತ್ತಿರುವ ಸಂದಿಗ್ಧತೆ. ಈ ಸಂಬಂಧದಲ್ಲಿ ಸರ್ಕಾರಕ್ಕೆ ಪತ್ರದ ಮೂಲಕ ಮಾರ್ಗಸೂಚಿಯ ಬದಲಾವಣೆ ಮಾಡಿದರಷ್ಟೇ ಎಲ್ಲಾ ಶಾಸಕರು ಮತದಾನಕ್ಕೆ ಅವಕಾಶವಾಗುತ್ತದೆ ಎಂಬುದು ಅವರ ಪತ್ರದ ತಿರುಳು. ಅಂದಹಾಗೆ, ಮುಖ್ಯಮಂತ್ರಿ ಯಡಿಯೂರಪ್ಪ ಸೇರಿದಂತೆ 65 ಮೀರಿರುವ ಹಲವಾರು ಮಂದಿ ಮಂತ್ರಿಗಳು ವಿಧಾನಸೌಧದಲ್ಲಿ ನಡೆಯುವ ಸಂಪುಟ ಸಭೆ ಹಾಗೂ ಇನ್ನಿತರ ಅಧಿಕಾರಿಗಳ ಸಭೆಯಲ್ಲಿ ಸತತವಾಗಿ ಪಾಲ್ಗೊಳ್ಳುತ್ತಿದ್ದಾರೆ.

ಈ ಸಂದಿಗ್ಧ ಪರಿಸ್ಥಿತಿ ನಿವಾರಣೆಗೆ ಸರ್ಕಾರ ಕ್ರಮ ಕೈಗೊಳ್ಳದೇ ಹೋದರೆ ಏನಾಗಬಹುದು ಎಂಬುದು ಕಾದುನೋಡಬೇಕಾದ ವಿಚಾರ.